ಮುಳುಗುತ್ತಿರುವ ಕಂಪನಿಗೆ ಜೀವ ತುಂಬಲು ನಾಲ್ಕೈದು ವರ್ಷಗಳೇ ಬೇಕಾದವು ಅವನಿಗೆ. ತನ್ನೆಲ್ಲಾ ಪಿತ್ರಾರ್ಜಿತ ಆಸ್ತಿಯ ಮೇಲೆ ಸಾಲ ತೆಗೆದ, ಅಣ್ಣ ವಿರಾಜನನ್ನೂ ಒಪ್ಪಿಸಿ ಅವನ ಆಸ್ತಿಯ ಮೇಲೂ ಸಾಲ ತೆಗೆದ. ವಿಕ್ರಂ ತನ್ನ ಹೆಂಡತಿಯನ್ನೊಂದು ಅಡವಿಡಲಿಲ್ಲ ಬಿಟ್ಟರೆ ಆಗ ಅವನದ್ದು ಅಂತ ಏನೇನೂ ಉಳಿದಿರಲಿಲ್ಲ. ಟೆಕ್ನೋಮಾರ್ಕ್ ಕಂಪನಿಯನ್ನು ತನ್ನ ಕೈಗೆ ತೆಗೆದುಕೊಂಡಾಗಿನಿಂದಲೂ ಒಂದು ರೀತಿಯಲ್ಲಿ ಮಾಡು ಇಲ್ಲವೇ ಮಡಿ ಸ್ಥಿತಿಯಲ್ಲಿದ್ದ ವಿಕ್ರಂ. ಅವನ ದುಸ್ಸಾಹಸಕ್ಕೆ, ಭಂಡ ಧೈರ್ಯಕ್ಕೆ ಅವನ ಹೆಂಡತಿ ರುಕ್ಮಿಣಿಯೂ ಬೆನ್ನೆಲುಬಾಗಿ ನಿಂತಿದ್ದಳು. ಹಳೆಯದನ್ನೆಲ್ಲಾ ಈಗ ನೆನಪಿಸಿಕೊಂಡರೆ ಸಾಧನೆ ಎನ್ನಿಸುತ್ತದೆ ಎಲ್ಲರಿಗೂ. ಅದಕ್ಕಾಗಿಯೇ ಅಲ್ಲವೇ ಪರ್ಸನಾಲಿಟಿ ಡೆವಲಪ್ಮೆಂಟ್ ಅಂತ ಭಾಷಣ ಕೊರೆಯಲು ಎಲ್ಲೆಲ್ಲಿಂದಲೋ ವಿಕ್ರಮನಿಗೆ ಆಹ್ವಾನ ಬರುವುದು! ಆದರೆ ಆ ದಿನಗಳಲ್ಲಿ ಅದೊಂದು ಹುಚ್ಚು ಸಾಹಸವೇ ಆಗಿತ್ತು.

ಕಷ್ಟಗಳು ಬಂದರೆ ಒಂದರ ಹಿಂದೊಂದರಂತೆ ಬರುತ್ತವೆಯಂತಲ್ಲ, ವಿಕ್ರಮನಿಗೆ ಆದದ್ದೂ ಹಾಗೆಯೇ! ಬೆನ್ನು ತಟ್ಟಿ ಪ್ರೋತ್ಸಾಹ ನೀಡಿ, ಕೈಮೀರಿ ಸಹಾಯ ನೀಡುತ್ತಿದ್ದ ಅಕ್ಕರೆಯ ಅಣ್ಣ ವಿರಾಜ ಒಂದು ದಿನ ಬೆಳಗ್ಗೆ ಫ್ಯಾನಿನಲ್ಲಿ ನೇತಾಡುವ ಹೆಣವಾಗಿದ್ದ. ಅತ್ತಿಗೆ ಪೂರ್ಣಿಮಾಗೆ ವಿವಾಹೇತರ ಸಂಬಂಧ ಇತ್ತು, ಅದನ್ನು ಕಣ್ಣಾರೆ ಕಂಡು ಆಘಾತಕ್ಕೊಳಗಾದ ವಿರಾಜ ಈ ತರಹದ ಅತಿರೇಕದ ನಿರ್ಧಾರ ತೆಗೆದುಕೊಂಡ ಎಂದು ಎಲ್ಲರೂ ನಂಬುವಂತೆ ಆಡಿಕೊಂಡರು ಹತ್ತಿರದವರು. ಪೂರ್ಣಿಮಾ ರವದಷ್ಟೂ ಮಾತನಾಡದೆ, ಯಾರಿಗೂ ಸಮಜಾಯಿಷಿ ಕೊಡದೆ ವಿರಾಜನ ದಿನಕಾರ್ಯ ಮುಗಿಯುತ್ತಲೇ ತನ್ನ ತವರು ಸೇರಿದ್ದಳು. ಅಣ್ಣ ಅತ್ತಿಗೆಯರದ್ದು ಪ್ರೇಮ ವಿವಾಹವಾದರೂ ದುರಂತದ ಅಂತ್ಯ ಕಂಡು ವಿಕ್ರಂ ನಲುಗಿದ್ದು ಹೌದು, ಬದಲಾಗಿದ್ದೂ ಹೌದು. ಮದುವೆ, ಪ್ರೀತಿ, ನಂಬಿಕೆ ಎಲ್ಲವೂ ಸುಳ್ಳು ಎನ್ನುವಷ್ಟರಮಟ್ಟಿಗಿನ ಬದಲಾವಣೆ!

ಮುಳುಗುವೆನಾ ಅಥವಾ ಮೇಲೇಳುವೆನಾ ಎಂದು ತಿಳಿಯದೆ ಬದುಕುತ್ತಿದ್ದ ವಿಕ್ರಮನೊಳಗೆ ವಿರಾಜನ ಸಾವು ಒಂದು ರೀತಿಯ ಅಧೀರತೆ, ಅಭದ್ರತೆಯ ಭಾವನೆಯನ್ನು ಹುಟ್ಟುಹಾಕಿತ್ತು, ಸಾಲ ಸೋಲದಲ್ಲಿ ಮುಳುಗಿದ ಈ ಸ್ಥಿತಿಯಲ್ಲಿ ರುಕ್ಮಿಣಿಯೂ ತನ್ನನ್ನು ತೊರೆದಾಳು ಎಂಬ ಭಯವೂ ಜೊತೆಗಿತ್ತು ಎಂದುಕೊಳ್ಳಿ. ಅವಳು ಅಪ್ಪಿ ತಪ್ಪಿ ಯಾರೊಂದಿಗೂ ನಗುತ್ತಾ ಮಾತನಾಡುವಂತಿಲ್ಲ, ವಿಕ್ರಂ ಕೆರಳುತ್ತಿದ್ದ; ಡೀಪ್‌ನೆಕ್ ಬ್ಲೌಸ್ ಹಾಕುವಂತಿಲ್ಲ, ಸ್ಲೀವ್ಲೆಸ್ ಬಟ್ಟೆ ತೊಟ್ಟರೂ ಕುದಿಯುತ್ತಿದ್ದ.

'ಯಾರು ನೋಡಲಿ ಅಂತ ಇಂಥಾ ಬಟ್ಟೆಯನ್ನೆಲ್ಲಾ ತೊಡಬೇಕು? ಗಂಡನಾದವನು ಮುಂದೇನು ಅಂತ ತಲೆಕೆಡಿಸಿಕೊಳ್ಳುತ್ತಿದ್ದರೆ ನಿನಗೆ ಮೋಜಿನ ಬದುಕನ್ನು ಬಿಡಲೇ ಆಗುತ್ತಿಲ್ಲ ಅಲ್ಲವಾ?' ಎಂದು ಜರೆಯುತ್ತಿದ್ದ.

'ನನ್ನಿಂದಾದ ಎಲ್ಲಾ ಸಹಕಾರವನ್ನು ಕೊಡುತ್ತಿದ್ದೇನೆ, ಆಫೀಸಿನ ಕಾಗದ ಪತ್ರದ ಕೆಲಸವನ್ನೂ ವಹಿಸಿಕೊಂಡಿದ್ದೇನೆ. ನಿಮ್ಮ ಯಾವ ಕೆಲಸಕ್ಕೂ ಬೇಡ ಎನ್ನುತ್ತಿಲ್ಲ. ಇಷ್ಟಾದ ಮೇಲೂ ಕಷ್ಟದಲ್ಲಿದ್ದೇನೆಂದು ತೋರಿಸಿಕೊಳ್ಳಲು ನಾನೇನು ಹರಿದ ಬಟ್ಟೆ ಹಾಕಿಕೊಂಡು ತಿರುಗಬೇಕೆ?' ಎಂದು ರುಕ್ಮಿಣಿಯೂ ಜಬರದಸ್ತಿನಲ್ಲಿಯೇ ರೇಗುತ್ತಿದ್ದಳು.

ವಿರಾಜನ ಸಾವಿನ ನಂತರ ವಿಕ್ರಂ ರುಕ್ಮಿಣಿಯ ಮೇಲೆ ಸಂದೇಹ ಪಡುವುದು ಜಾಸ್ತಿಯಾಗಿದ್ದಷ್ಟೇ ಅಲ್ಲ, ಸಿಗರೇಟಿನ ದೊಂದಿ ಕತ್ತಿಸಿಕೊಂಡು ರುಕ್ಮಿಣಿಯ ಬೆನ್ನು, ಭುಜ ತೋಳುಗಳನ್ನು ಯಾರೊಂದಿಗೋ ಸಂಬಂಧ ಹೊಂದಿರುವುದನ್ನು ಕಲ್ಪಿಸಿ ಜರೆಯುತ್ತ ಸುಡುತ್ತಿದ್ದ. ಮೊದಲೆಲ್ಲಾ ಅತ್ತು ಪ್ರತಿಭಟಿಸುತ್ತಿದ್ದವಳು ಕ್ರಮೇಣ ಸಿಗರೇಟಿನಿಂದ ಸುಡಿಸಿಕೊಳ್ಳುವುದು ಸಾಮಾನ್ಯವೆಂಬಂತಾಯ್ತು ರುಕ್ಮಿಣಿಗೆ. ವಿಕ್ರಂ ಸಿಗರೇಟಿನಿಂದ ಸುಟ್ಟಷ್ಟೂ ಅಳದಷ್ಟು ಅಂತರ್ಮುಖಿಯಾಗತೊಡಗಿದಳು. ರುಕ್ಮಿಣಿಯ ಅಳುವಿಗಿಂತ ಅವಳ ಮೌನವೇ ವಿಕ್ರಮನನ್ನು ಇನ್ನೂ ಕೆರಳಿಸುತ್ತಿತ್ತು. ಅವನು ಮತ್ತೂ

